

**ಬಸವ ಪುತ್ಥಳಿಗೆ ಅನುದಾನ : ಮುರುಘಾ ಶರಣರಿಂದ ಅಭಿನಂದನೆ**

ಬಸವಣ್ಣನವರು ಸಮಾಜ ಸುಧಾರಣೆ ಮಾಡಿದ ಶ್ರೇಷ್ಠ ದಾರ್ಶನಿಕರು. ಅವರು ತಮ್ಮ ಕ್ರಾಂತಿಯ ಮೂಲಕ ಸಮಾನತೆ ತಂದುಕೊಟ್ಟ ಮಹಾಮಾನವತಾವಾದಿ. ಅವರು ಎಲ್ಲ ಕಾಲಕ್ಕು ಆದರ್ಶಪ್ರಾಯರು. ಅಂತಹ ಮಾನವತಾವಾದಿ ವಿಶ್ವಗುರು ಬಸವಣ್ಣನವರ ಭವ್ಯವಾದ ಪುತ್ಥಳಿ ನಿರ್ಮಾಣ ಕಾರ್ಯ ಇನ್ನು ತ್ವರಿಗತಿಯಲ್ಲಿ ನಡೆಯಲೆಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು 2020ರ ಬಜೆಟ್‌ನಲ್ಲಿ ಪುತ್ಥಳಿ ನಿರ್ಮಾಣ ಯೋಜನೆಗೆ 20 ಕೋಟಿ ರೂ.ಗಳನ್ನು ನೀಡಿರುವುದು ಸಂತಸ ತಂದಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಬಸವ ಪುತ್ಥಳಿ ಯೋಜನೆ ನೂರಾರು ಕೋಟಿ ಯೋಜನೆಯಾಗಿದ್ದು ಕೊಟ್ಟಿರುವ ಹಣವನ್ನು ಸೂಕ್ತವಾಗಿ ಬಳಸಿಕೊಳ್ಳಲಾಗುವುದು. ಇನ್ನೂ ಹಣದ ಅವಶ್ಯಕತೆ ಇದ್ದು ಮುಂದೆಯೂ ಸರಕಾರದಿಂದ ನಿರೀಕ್ಷೆ ಮಾಡುತ್ತೇವೆ. ಕಾರಣ ಇದೊಂದು ಪ್ರವಾಸಿ ಕೇಂದ್ರವಾಗುವುದರಿಂದ ಸರ್ಕಾರ ಇದರ ಕಡೆ ವಿಶೇಷ ಗಮನಹರಿಸಬೇಕೆಂದಿದ್ದಾರೆ.

ಮಾಜಿಮುಖ್ಯಮಂತ್ರಿ  ಎಸ್.ನಿಜಲಿಂಗಪ್ಪನವರ ನಿವಾಸವನ್ನು ಪ್ರವಾಸ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಯೋಜನೆಗೆ ಬಜೆಟ್‌ನಲ್ಲಿ 5 ಕೋಟಿ ರೂ. ಘೋಷಿಸಿರುವುದಕ್ಕೆ ಅಭಿನಂದನೆ ಸಲ್ಲಿಸಿರುವ ಶ್ರೀಗಳು, ತುಂಬ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಯಡಿಯೂರಪ್ಪನವರು ಸ್ಪಂದಿಸಿದ್ದಾರೆ. ಅದೊಂದು ಪ್ರವಾಸಿ ಕೇಂದ್ರವಾಗುವುದು ನಮಗೆ ಹೆಮ್ಮೆಯ ಸಂಗತಿ. ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.